ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನುಮಾರು 5,000 ಪೋಲಿಂಗ್ ಬೂತುಗಳು ಇರುತ್ತವೆ.

ಶ್ರೀ ಎಂ. ಮಾದಯ್ಯನವರು.—ಎಷ್ಟು ಜನ ಸಂಖ್ಯೆಗೆ ಒಂದೊಂದು ಪೋಲಿಂಗ್ ಬೂತು ಮಾಡಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಓಟರು ಗಳ ಪಟ್ಟಿಯ ಮೇಲೆ ಹೋಗುತ್ತದೆ. 500 ಓಟರು ಗಳಿಗೆ ಒಂದು ಪೋಲಿಂಗ್ ಬೂತು ಎಂಬುದಾಗಿ ಮಾಡಿ ದ್ದೇವೆ.

ಶ್ರೀ ಎಂ. ಮಾದಯ್ಯನವರು.—ಸಿಬ್ಬಂದಿ ಎಷ್ಟು ಆಗುತ್ತದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗಲೇ ಹೇಳುವುದಕ್ಕಾಗುವುದಿಲ್ಲ. ತನಿಖೆಮಾಡುತ್ತಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ಎಲ್ಲಾ ಕಡೆಯಲ್ಲೂ ಚುನಾವಣೆ ಒಂದೇ ಸಾರಿ ಮಾಡುತ್ತೀರೋ ಅಥವಾ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಸಾರಿ ಮಾಡು ತ್ತೀರೋ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೊಂದು ಕ್ಷೇತ್ರದಲ್ಲಿ ಒಂದೊಂದು ದಿನ ಮಾಡಬೇಕೆಂದು ಇದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರಿಚ್ಯಾಸೀಡೆಡ್ ಪ್ರದೇಶ).—ಜನ ಸಂಖ್ಯೆ ಒಂದು ಲಕ್ಷ ಕ್ಕಿಂತ ಹೆಚ್ಚಾಗಿರುವ ಕಡೆ ಆ ಕ್ಷೇತ್ರಕ್ಕೆ ಇನ್ನೊಂದು ಸ್ಥಾನ ಕೊಡುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಓಟರುಗಳ ಲಿಸ್ಟ್ ಪ್ರಕಾರ ಡೀಲಿಮಿಟೇಷನ್ ಮಾಡಿದ್ದೇವೆ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಕ್ಷೇತ್ರ ವಿಂಗಡಣೆಯ ವಿಚಾರದಲ್ಲಿ ಈ ಸಭೆಯಿಂದ ಒಂದು ಪ್ರಪೋಸಲ್ ಕಳುಹಿಸಿದ್ದೆವು, ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನು ಅಖೈರಾಗಿ ಒಪ್ಪಿದ್ದಾರೆ ಎಂದು ಹೇಳುವುದಕ್ಕಾಗು ವುದಿಲ್ಲ. ನಾವು ಲಿಸ್ಟನ್ನು ಕಳುಹಿಸಿದ್ದೇವೆ. ವಾರ್ಡಿ ಮೆಂಟಿನ ಸ್ಪೀಕರ್‌ರವರು ಅಡ್ವೈಸರಿ ಸಮಿತಿ ಎಂಬ ಒಂದು ಸಮಿತಿಯನ್ನು ನೇಮಕಮಾಡಿದ್ದರು. ಅವರೂ ಸಹ ಒಂದು ವರದಿಯನ್ನು ಕಳುಹಿಸಿದ್ದಾರೆ. ಇದ ನ್ನೆಲ್ಲಾ ಅವರೇ ತೀರ್ಮಾನ ಮಾಡಬೇಕು. ಇನ್ನೂ ಮಾಡಿಲ್ಲ.

ಶ್ರೀ ಟಿ. ಸಿ. ಹೊನ್ನಪ್ಪನವರು.—ಫೈನಲ್ ಲಿಸ್ಟ್ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ಚುನಾವಣೆಗಳು ಸೆಟಿಸಸ್ ಆಗುವುದಕ್ಕೆ ಮುಂಚೆ ನಡೆಯುತ್ತದೆ ಎಂದು ಹೇಳಿರಲಿಲ್ಲವೆ ?

ಮಾನ್ಯ ಶ್ರೀ ಕೆ ಟಿ. ಭಾಷ್ಯಂರವರು.—ಹಾಗೆ ಹೇಳಿ ರಲಿಲ್ಲ. ಎಷ್ಟು ಬೇಗ ಆದರೆ ಅಷ್ಟು ಬೇಗ ಎಂದು ಹೇಳಿತ್ತು.

ಶ್ರೀ ಬಿ. ಹುಚ್ಚೇಗೌಡರು.—ಈಗ ಸೆಟಿಸಸ್ ಆದ ಮೇಲೆ ಈ ಚುನಾವಣೆಗಳು ನಡೆಯುವುದರಿಂದ ಕಾಂ ಸ್ಟಿಟ್ಯೂಷ್ಟ್ ಆಕ್ಟ್‌ಗೆ ವಿರೋಧವಾಗುವುದಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೊನೆಯಲ್ಲಿ ಆ ರೀತಿ ಕಾಂಸ್ಟಿಟ್ಯೂಷ್ಟಗೆ ವಿರೋಧವಾಗಿದೆ ಎಂದು ತಿಳಿದುಬಂದರೆ, ತನಿಖೆಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಭಾರತದ ರಾಜ್ಯಾಂ ಗದ ಪ್ರಕಾರ, ಬರುವ ಎಲೆಕ್ಷನ್‌ಗೆ ಈಗ ನಡೆದ ಸೆನ್ಸಸ್ ಲೆಕ್ಕಕ್ಕೆ ಬದಲಾಗಿ ಹಿಂದಿನ ಸೆನ್ಸಸ್ ಲೆಕ್ಕಗಳನ್ನೇ ತೆಗೆ ದುಕೊಳ್ಳಬೇಕೆಂದು ಕಾನೂನಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕಾನೂನಿ ನಲ್ಲಿ ಹಾಗೇನೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆಯೇ ಇದೆ. ತಾವು ದಯವಿಟ್ಟು ನೋಡಿ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ರೀತಿ ಇಲ್ಲ. ಭಾರತದ ಪ್ರೆಸಿಡೆಂಟರು People's Representation Act ಎಂದು ಮಾಡಿದ್ದಾರೆ. ಅದರಂತೆ ಲೆಕ್ಕಾಚಾರ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—People's Representation Act ಮಾಡಿರುವುದೂ ಭಾರತದ ರಾಜ್ಯಾಂಗಕ್ಕೆ ಅನುಸಾರವಾಗಿಯೇ. ನೀವು ಹೋದ ವರ್ಷ ಡಿಸೆಂಬರಿನೊಳಗೇ ಎಲೆಕ್ಷನ್ ನಡೆಸಿದ್ದರೆ ರಾಜ್ಯಾಂಗ ಶಾಸನಕ್ಕೆ ಸರಿಹೋಗುತ್ತಿತ್ತು. ಅದಕ್ಕೆ ಬದಲು ಈ ವರ್ಷ ಡಿಸೆಂಬರಿನಲ್ಲಿ ಮಾಡುವುದರಿಂದ ರಾಜ್ಯಾಂಗ ಶಾಸನವನ್ನು ಮತ್ತೆ ತಿದ್ದುಪಡಿಮಾಡಬೇ ಕಾಗುತ್ತದಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೇನೂ ಮಾಡಬೇಕಾದ್ದಿಲ್ಲವೆಂದು ಆಗಲೇ ಹೇಳಿದ್ದೇನೆ. ನೀವು ಹೇಳಿದಂತೆ ಇದ್ದರೆ ದಯವಿಟ್ಟು ಸಂಬಂಧಪಟ್ಟ ಸೆಕ್ಷನ ನ್ನು ಓದಿ ತಿಳಿಸಿ.

Sri M. V. KRISHNAPPA (Kolar District-General).—Is it not a fact that the population of each province was determined by the number of voters?

The Hon'ble Sri K. T. BHASHYAM.—Yes, it was.

Sri M. V. KRISHNAPPA.—Then, will this question arise, namely, that they will have to determine the strength of the Assembly according to the census population?

The Hon'ble Sri K. T. BHASHYAM.—Not for this election.

Mr. DEPUTY SPEAKER.—Next question No. 156—Sri. G. A. Acharya. The Hon'ble Member is not present. The question will be treated as unstarred. Next question, No. 54.

Distribution of Yarn through Co-operative Societies and wholesale Dealers.

*Q.—54. **Sri B. HUTCHE GOWDA** (Tumkur District-General).—

Will the Government be pleased to state :—

(*a*) whether it is a fact that yarn distribution is entrusted to Co-operative Societies ;

(SRI B. HUTCHE GOWDA).

(*b*) the number of bales supplied to weavers during the months of December 1950, January and February 1951 ;

(*c*) out of this quantity, the bales supplied through societies and through wholesale dealers separately ?

A.—**The Hon'ble Sri T. MARIAPPA** (Home Minister).—

(*a*) Yes.

(*b*) The entire allotment of yarn required by Handloom Industry has been ordered to be allotted to the Mysore Provincial Cotton Weavers' Co-operative Society, Ltd., for distribution to weavers through the Weavers' Co-operative Societies.

In December through dealers—

325 bales for Handlooms.
40 bales for Minor Industries.

January—

365 bales for Handlooms (through Provincial Society).
11 bales for Drugget Manufacturers through wholesale dealers.
11 bales for Minor Industries through wholesale dealers.

February—

Proposed to allot 365 bales to Handlooms through Societies.
15 bales for Minor Industries.
15 bales to Drugget Manufacturers through wholesale dealers.

(*c*) During December—

24 bales through Government Yarn Depots and the rest through wholesale and retail dealers.

January—

40 bales direct from Mills, the rest through wholesalers through Provincial Society.

February—

40 bales direct from Mills, the rest through wholesalers through Provincial Co-operative Society.

ಶ್ರೀ ಬಿ. ಹುಚ್ಚೇಗೌಡರು.—ಕೈಮಗ್ಗದವರಿಗೆ ನೂಲನ ಹಂಚಿಕೆಮಾಡುವುದನ್ನು ಫ್ರೊವಿಷಿಯರ್ ಕಾರ್ಪ್ ವೀವರ್ಸ್ ಕೋ-ಆಪರೇಟಿವ್ ಸೊಸೈಟಿಗೆ ವಹಿಸಿದೆಯೆಂದು ಹೇಳಿದ್ದೀರಿ. ಈ ಸೊಸೈಟಿಗಳಿಗೆ ಕೊಡ ಬೇಕಾದರೆ ಹೋಲ್‌ಸೇಲರ್‌ಗಳನ್ನು ಗೊತ್ತುಮಾಡಿದ್ದೀರಾ ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆಗೆ (ಸಿ) ನಲ್ಲಿ ಉತ್ತರಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ನೇರವಾಗಿ ಸೊಸೈಟಿಗಳಿಗೇ ನರಬರಾಯಿಮಾಡುವುದಕ್ಕೆ ಸಾಧ್ಯವಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ನದ್ಯದಲ್ಲಿ ಸೊಸೈಟಿಯಲ್ಲಿ ಎಷ್ಟರಮಟ್ಟಿಗೆ ಹಣವಿದೆಯೆಂಬುದನ್ನು ನೋಡಿಕೊಂಡು 40 ಬೇಲುಗಳನ್ನು ಸೊಸೈಟಿಗಳಿಗೆ ನೇರವಾಗಿ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಸೊಸೈಟಿಗಳಿಗೆ ಈಗ 24 ಬೇಲುಗಳನ್ನು ಕೊಟ್ಟಿದೆಯೆಂದು ಹೇಳಿದಿರಿ. ಇದರಂತೆ ಮಿಕ್ಕದ್ದನ್ನೂ ಏಕೆ ಕೊಡಕೂಡದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—24 ಬೇಲುಗಳಲ್ಲ. ಜನವರಿಯಲ್ಲಿ 40 ಬೇಲುಗಳನ್ನು ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ಮಲ್ಟಿ-ಪರ್ಪಸ್ ಸೊಸೈಟಿಗಳು ಎಲ್ಲಾ ತಾಲ್ಲೂಕುಗಳಲ್ಲೂ ಇವೆ, ಎಲ್ಲಾ ಹೋಬಳಿಗಳಲ್ಲೂ ಇವೆ. ಅವುಗಳ ಮೂಲಕ ಏಕೆ ಕೊಡಕೂಡದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದಕ್ಕೆಲ್ಲಾ functional basis ಮೇಲೆ ಸೊಸೈಟಿಗಳನ್ನು ಸ್ಥಾಪನೆಮಾಡಿ ಕೆಲಸ ನಡೆಸುವುದು ಬಹಳ ಅಗತ್ಯ. ಆಯಾ ಕೈಗಾರಿಕೆಗಳಿಗೆ ಸಂಬಂಧಪಟ್ಟವರು ತಮಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುವುದು ಉತ್ತಮವೆಂದು ಹೇಳಿ, ಎಲ್ಲ 200 ಕೈಮಗ್ಗಗಳಿಗೆ ಜಾಸ್ತಿಯಿದೆಯೋ ಅಂಥ ನಂದರ್ಭಗಳಲ್ಲಿ ಅವರೇ ಪ್ರತ್ಯೇಕವಾಗಿ ಸೊಸೈಟಿ ಮಾಡಿಕೊಂಡು ನೂಲಿನ ಹಂಚಿಕೆಯೊಂದೇ ಅಲ್ಲದೆ ಅವರ ಉದ್ಯೋಗವನ್ನೂ ಅಭಿವೃದ್ಧಿ ಮಾಡಿಕೊಳ್ಳುವುದು ಅಗತ್ಯವೆಂದು ಸೊಸೈಟಿಗಳನ್ನು ಸ್ಥಾಪಿಸಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಳ್ಳಿಗಳಲ್ಲಿ ಇಂಥ ಕೈಮಗ್ಗದವರು ಒಬ್ಬರಿರುತ್ತಾರೆ, ಇಬ್ಬರಿರುತ್ತಾರೆ. ಅವರಿಗೆಲ್ಲಾ ಹಂಚಿಕೆ ಹೇಗೆ ಮಾಡುತ್ತೀರಿ ? ನೀವು ಹೇಳಿದಂತೆ ಒಂದೊಂದು ಸೊಸೈಟಿಗೂ 200 ಜನರನ್ನು ಸೇರಿಸುವುದು ಕಷ್ಟ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನದ್ಯದಲ್ಲಿ ಆ ಪ್ರಶ್ನೆಯೇ ಬರುವುದಿಲ್ಲ. ಈಗ ಇಬ್ಬರಿಗೂ ಕೊಡಬೇಕೆಂದು ಮಾಡಿದೆ.

ಶ್ರೀ ಬಿ. ಹುಚ್ಚೇಗೌಡರು.—ಆ ರೀತಿ ಆಗುವುದಿಲ್ಲ. ಈ ವಿಷಯದಲ್ಲಿ ನಿಮ್ಮಲ್ಲಿಗೆ ಕೈಮಗ್ಗದವರು ನಿಯೋಗ ಬಂದು ಈ ರೀತಿ ಮಲ್ಟಿ-ಪರ್ಪಸ್ ಸೊಸೈಟಿಗಳ ಮೂಲಕ ಹಂಚಿಕೆಮಾಡುವ ಏರ್ಪಾಡು ಮಾಡಬೇಕೆಂದು ಕೇಳಿಕೊಂಡಿದ್ದರಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲ 200 ಜನರಿಗೆ ಕಡಿಮೆಯಿದ್ದಾರೋ ಅಲ್ಲ ತಾಲ್ಲೂಕು ಸೊಸೈಟಿಗಳ ಮೂಲಕ ಹಂಚಿಕೆಮಾಡಬೇಕೆಂದು ಮನವಿ ಬಂದಿದೆ.

ಶ್ರೀ ಬಿ. ಹುಚ್ಚೇಗೌಡರು —ಅದೇ ಪ್ರಕಾರ ತಾವು ಸೂಚನೆ ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೇಳಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು —ಈ ವರ್ಷ ಜನವರಿ ತಿಂಗಳಿನಲ್ಲಿ ಎಷ್ಟು ಹಂಚಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—365 ಬೇಲುಗಳನ್ನು ಕೊಟ್ಟಿದೆಯೆಂದು ಇಲ್ಲೇ ಹೇಳಿದೆ.

ಶ್ರೀ ಬಿ. ಹುಚ್ಚೇಗೌಡರು.—ನೆಯ್ಗೆಯವರಿಗೇನಾದರೂ ಜನವರಿ ತಿಂಗಳಲ್ಲಿ ನರಬರಾಯಿಯಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಜನವರಿ ತಿಂಗಳಲ್ಲಿ ಒಂದು ಲಡಿ ಕೂಡ ಅವರಿಗೆ ಸರಬರಾಯಿಯಾಗಿಲ್ಲವೆಂದು ತಮ್ಮಲ್ಲಿಗೆ ದೂರು ಬಂದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ವಲ್ಪ ಮಟ್ಟಿಗೆ ಕಡವಾಯಿತು, ಆಷ್ಟೆ; ಆಮೇಲೆ ಜನವರಿ ಕೋಟಾವನ್ನು ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಿಂದೆ 1950ನೆಯ ಜನವರಿಯಲ್ಲಿ ಕೊಟ್ಟಿದ್ದ ಕೋಟಾವಿಗೂ, ಈಗ 1951ರಲ್ಲಿ ಕೊಟ್ಟಿರುವ ಕೋಟಾವಿಗೂ ವ್ಯತಾಸವಿಲ್ಲವೇ ? ಈಗಿನ ಕೋಟಾ ಕಡಿಮೆಯಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಹಳ ಕಡಿಮೆಯಾಗಿದೆ. ನಮ್ಮ ಸಂಸ್ಥಾನಕ್ಕೆ ಬರುವ ಕೋಟಾ ಹಂಚಿಕೆಯೇ ಕಡಿಮೆಯಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಈ ಖೋತಾವನ್ನು ಸರಿಪಡಿಸುವುದಕ್ಕೆ ಏನುಮಾಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೀಗೆ ಖೋತಾ ಮಾಡಿರುವುದರಿಂದ ನಮ್ಮ ನೇಯ್ಗೆಯವರಿಗೆ ಬಹಳ ಮಟ್ಟಿಗೆ ತೊಂದರೆಯಾಗಿದೆಯೆಂಬ ಅಂಶವನ್ನು ಬೊಂಬಾಯಿನ ಟೆಕ್ಸ್‌ಟೈಲ್ ಕಮಿಷನರ್‌ರವರಿಗೆ ತಿಳಿಸಿರುವುದಲ್ಲದೆ ಕೇಂದ್ರ ಸರ್ಕಾರದವರ ಗಮನಕ್ಕೂ ತಂದಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು —ಬೊಂಬಾಯಿನಲ್ಲಿರುವ ನೇಯ್ಗೆಯವರಿಗೆ ಇಲ್ಲಿಗಿಂತಲೂ ಹೆಚ್ಚಿಗೆ ಕೋಟಾ ಕೊಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಪ್ರಾಂತ್ಯಗಳಲ್ಲೂ ಇದೇ ರೀತಿ ಕಡಿಮೆಯಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಅವರಿಗೆ ಜಾಸ್ತಿಕೊಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ವಿಚಾರಿಸಿ ನೋಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ವಿಚಾರಿಸಿಕೊಂಡೇ, ನಮ್ಮ ಸಂಸ್ಥಾನಕ್ಕೆ ಹೆಚ್ಚಿಗೆ ಮಾಡಬೇಕೆಂದು ಬೊಂಬಾಯಿ ಟೆಕ್ಸ್‌ಟೈಲ್ ಕಮಿಷನರ್ ರವರ ಗಮನಕ್ಕೆ ತಂದಿರುವುದಲ್ಲದೆ ಕೇಂದ್ರ ಸರ್ಕಾರದವರಲ್ಲಿಯೂ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಕೇಂದ್ರದವರೇನಾದರೂ ಹೆಚ್ಚಿಗೆ ಕೊಡುತ್ತೇವೆಂದು ಹೇಳಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏಪ್ರಿಲ್ ತಿಂಗಳಲ್ಲಿ ಪರಿಸ್ಥಿತಿ ಉತ್ತಮಗೊಳ್ಳುವಂತಿದೆ.

ಶ್ರೀ ಬಿ. ಹುಚ್ಚೇಗೌಡರು.—ಎಷ್ಟು ಹೆಚ್ಚಿಗೆ ಬರುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೇಳುವುದಕ್ಕಾಗುವುದಿಲ್ಲ. ನಾವಂತೂ ಈ ವಿಚಾರದಲ್ಲಿ ಬೇಕಾದಷ್ಟು ಬರೆದಿದ್ದೇವೆ. ಖುದ್ದು ಹೋಗಿ ಮಾತನಾಡಿದ್ದೇವೆ. ಬೊಂಬಾಯಿ ಟೆಕ್ಸ್‌ಟೈಲ್ ಕಮಿಷನರು ಇಲ್ಲಿ ಬಂದಿದ್ದಾಗ್ಗೆ ಎಲ್ಲಾ ವಿವರಿಸಿದ್ದೇವೆ. ಇದರ ಫಲವಾಗಿ ಡಿಸೆಂಬರಿನ ಕೋಟಾಗಿಂತ ಜನವರಿಗೆ ಜಾಸ್ತಿಕೊಟ್ಟಿದೆ. ಜಾಸ್ತಿ ಕೋಟಾ ಬಂದರೆ ನಾವೂ ಜಾಸ್ತಿ ಕೊಡುತ್ತೇವೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಹಾಲ ನೂಲು ಮಾರುವವರು ಎಷ್ಟು ಜನ ಇದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 500 ಜನ ಇದ್ದಾರೆ.

ಶ್ರೀ ಜಿ. ವೀರಪ್ಪನವರು.—ಅವರು ಹಂಚಿಕೆ ಮಾಡುತ್ತಿದ್ದುದನ್ನು ತಪ್ಪಿಸಿ ಈ ಹೊಸ ಪದ್ಧತಿಯನ್ನು ತರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಾರಣ ಏನೂ ಇಲ್ಲ. ನೈಮಗ್ಗದ ನೇಯ್ಗೆ ನೈಗಾರಿಕೆಯನ್ನು ವ್ಯವಸ್ಥೆ ಮಾಡಬೇಕು. ನೈಮಗ್ಗದವರೆಲ್ಲರೂ ಸೇರಿ ಒಂದು ಸಂಸ್ಥೆಯನ್ನು ಮಾಡಿಕೊಳ್ಳುತ್ತೇವೆ, ನಾವೇ ನೂಲನ್ನು ಹಂಚುತ್ತೇವೆ, ನಮಗೇ ನೂಲನ್ನು ಒದಗಿಸಿಕೊಡಿ ಎಂದು ಹೇಳಿದರೆ ಅದನ್ನು ಪ್ರತಿ ಬಂಧಿಸುವುದು ಕಷ್ಟ.

ಶ್ರೀ ಜಿ. ವೀರಪ್ಪನವರು.—ಹೀಗೆ ನೀವು ಮೊದಲಿದ್ದ ಪದ್ಧತಿಯನ್ನು ಬದಲಾಯಿಸಿದ್ದನ್ನು ನೂಲಿನ ವ್ಯಾಪಾರಿಗಳವರು ಪ್ರತಿಬಂಧಿಸಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರೂ ಬಂದು ತಮಗೆ ತೊಂದರೆಯಾಗಿದೆಯೆಂದು ಹೇಳಿದ್ದಾರೆ.

ಶ್ರೀ ಜಿ. ವೀರಪ್ಪನವರು.—ಅವರಿಗೇನು ಪರಿಹಾರ ಕೊಟ್ಟಿದ್ದೀರಿ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪರಿಹಾರ ಕೊಡುವುದು ಕಷ್ಟ. ಆದರೂ ಅವರ ಕಷ್ಟವನ್ನು ಹೇಗೆ ನಿವಾರಣೆ ಮಾಡಬೇಕೆಂಬುದನ್ನು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಜಿ. ವೀರಪ್ಪನವರು.—ಅವರ ವಿಚಾರದಲ್ಲಿ ಕನಿಕರವಿಟ್ಟು ಬೇರೆ ತರದಲ್ಲಿ ಒಟ್ಟೆ ಲೈಸನ್ಸ್ ಮುಂತಾದುವುಗಳನ್ನು ಕೊಡಬೇಕೆಂಬುದನ್ನು ಯೋಚನೆ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರಿಗೂ ಯಾವುದಾದರೂ ರೀತಿಯಲ್ಲಿ ಸಾಧ್ಯವಾಗಿ ಸಹಾಯ ಮಾಡುವುದು ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಜಿ. ವೀರಪ್ಪನವರು.—ಈಗ ಇದರ ಪರಿಣಾಮವಾಗಿ ಅನೇಕ ಕಡೆ ಸಣ್ಣ ಪುಟ್ಟ ಸೊಸೈಟಿಗಳು ಹುಟ್ಟಿಕೊಂಡು ನೂಲನ್ನು ಪಡೆದುಕೊಂಡು ದುಡ್ಡು ಹೊಡೆಯುವುದಕ್ಕೆ ಅವಕಾಶವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಭಾವಿಸಕೂಡದು. ಈಗ ತಾನೆ ಶುರು ಆಗಿರುವುದರಿಂದ ಸ್ವಲ್ಪಮಟ್ಟಿಗೆ ಲೋಪದೋಷಗಳು ಬಂದಿರಬಹುದು. ಅವರ ಲೆಕ್ಕ ಪತ್ರಗಳನ್ನೆಲ್ಲಾ ತನಿಖೆಮಾಡಿ ಎಲ್ಲವೂ ಸರಿಯಾಗಿದ್ದರೆ ಅಂಥಾ ಸೊಸೈಟಿಗಳಿಗೆ ಮಾತ್ರ ನೂಲು ಕೊಡುತ್ತೇವೆ.

ಶ್ರೀ ಜಿ. ವೀರಪ್ಪನವರು.—ಅವರು ನೂಲು ತೆಗೆದು ಕೊಳ್ಳಬೇಕಾದರೆ ಹೇಗೆ ತೆಗೆದುಕೊಳ್ಳಬೇಕೆಂಬುದನ್ನು ನಿಗದಿ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೂಲು ತೆಗೆದುಕೊಳ್ಳುವವರಿಗೆ ಒಂದೇ ಬಗೆಯ ನೂಲನ್ನು ಸರಿಯಾಗಿ ಹಂಚಿ, ಉತ್ಪತ್ತಿಯಾದ ಬಟ್ಟೆಯನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಬಟ್ಟೆ ಮಾಡುವಾಗ ಅವರ design ಗಳನ್ನು ಉತ್ತಮಪಡಿಸಬೇಕು, ಖಾತರಿಯಾದ ಬಣ್ಣ ಹಾಕಬೇಕು, ನೈಮಗ್ಗವನ್ನೂ ಉತ್ತಮಪಡಿಸಿಕೊಳ್ಳಬೇಕು—ಇವೆಲ್ಲಾ ಮಾಡಬೇಕೆಂದು ತಿಳಿಸಿದೆ.

ಶ್ರೀ ಜಿ. ವೀರಪ್ಪನವರು.—ನೂಲು ಕೊಟ್ಟಮೇಲೆ ಮತ್ತೆ ನೂಲು ಪರೀಕ್ಷಿಸಬೇಕಾದರೆ ಬಟ್ಟೆ ಕೊಡಬೇಕೆಂದು ನಿಗದಿಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಮುಂದಿನ ಹೆಜ್ಜೆ. ಈ ರೀತಿ ನೂಲು ಕೊಟ್ಟು ಅವರಿಂದಾದ ಬಟ್ಟೆಯನ್ನೆಲ್ಲಾ ತೆಗೆದುಕೊಂಡು ನೈಮಗ್ಗಗಳನ್ನು ಸರಿಯಾಗಿ ವ್ಯವಸ್ಥೆ ಮಾಡಬೇಕೆಂದಿದ್ದೇವೆ.

Sri G. VEERAPPA.—So, you guarantee the sale of cloth also?

The Hon'ble Sri T. MARIAPPA.—That is one of the very objects of the scheme itself.

ಶ್ರೀ ಬಿ ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ) — ಕೈಮಗ್ಗಗಳವರಿಗೆ ವರ್ಷಕ್ಕೆ ಎಷ್ಟು ನೂಲಿನ ಕೋಟಾ ಬೇಕಾಗುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟೇ ಎಂದು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ, ಅಂದಾಜು ಮಾಡಲಾಗಿದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಆ ಅಂದಾಜಿನ ಪ್ರಕಾರ ಎಷ್ಟು ಕಡಿಮೆ ಬೀಳುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಅಂದಾಜಿಗೂ ಈಗ ನಮಗೆ ಬರುತ್ತಿರುವ ಪ್ರಮಾಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಸಂಸ್ಥಾನದಲ್ಲಿ ಎಷ್ಟು ದಿನಗಳಿಂದ ಈ ಅಜಗಜಾಂತರ ವ್ಯತ್ಯಾಸವಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪೂರ್ವದಲ್ಲಿ ನೂಲು ಯಥೇಚ್ಛವಾಗಿ ಬರುತ್ತಿತ್ತು. ಸಂಸ್ಥಾನಕ್ಕೆ ತಿಂಗಳಿಗೆ 2,500 ಬೇಲು ಬರುತ್ತಿತ್ತು. ಅಷ್ಟನ್ನೂ ಉಪಯೋಗ ಮಾಡದೇ ಇರುವವರೂ ಇದ್ದರು. 1917ರಲ್ಲಿ 2,155 ಬೇಲು ನೂಲು ಬಂದಿತ್ತು. Normal quota 1,663 ಬೇಲು ನಮಗೆ ಬೇಕಾಗುವುದು ಆದರೆ ಈ ದಿವಸ ಕೇವಲ 700ಕ್ಕೆ ಇಳಿದಿದೆ. ಆದಕ್ಕೇ ಇಷ್ಟು ಕಷ್ಟವಾಗಿರುವುದು. ಡಿಸೆಂಬರ್ ತಿಂಗಳಲ್ಲಿ 500ಕ್ಕೆ ಇಳಿಯಿತು.

ಶ್ರೀ ಬಿ. ಚೆನ್ನಬೈರೇಗೌಡರು.—ಇದು ಸಾಕಾಗುವುದಿಲ್ಲವೆಂಬುದು ಸರ್ಕಾರದವರಿಗೆ ಗೊತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—It is obvious, 1,663 ಬೇಲು ಕೊಟ್ಟರೆ ಸಾಕಾಗುತ್ತದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಎಷ್ಟು ದಿನಗಳಿಂದ ಇಷ್ಟು ಕಷ್ಟವಾಗಿರುವುದು?

ಮಾನ್ಯ ಟಿ. ಮರಿಯಪ್ಪನವರು.—ಸುಮಾರು ನಾಲ್ಕೈದು ತಿಂಗಳುಗಳಿಂದ.

ಶ್ರೀ ಬಿ. ಚೆನ್ನಬೈರೇಗೌಡರು.—ಇದನ್ನು ಎಷ್ಟು ದಿನಗಳಲ್ಲಿ ಸರಿಪಡಿಸುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರದವರೂ ಜೆಕ್ಕೋಸ್ಲೊವೆಕಿಯಾ ಕಂಪೆನಿಯವರೂ ಏಪ್ರಿಲ್ ತಿಂಗಳಿನಲ್ಲಿ ಸರಿಹೋಗುತ್ತದೆಂದು ಭರವಸೆ ಕೊಟ್ಟಿದ್ದಾರೆ.

Sri Kadidal MANJAPPA (Shimoga District—General).—Who is supplying yarn to the dyeing factories?

The Hon'ble Sri T. MARIAPPA.—We are not supplying yarn to the dyeing factories. It is the merchants who supply to the dyeing factories.

Sri Kadidal MANJAPPA.—Have you fixed the quota to be supplied to the dyeing factories?

The Hon'ble Sri T. MARIAPPA.—We have fixed the quota for the handloom weavers, for the power looms and drugget manufacturers and minor industries.

Sri Kadidal MANJAPPA.—If the owners or the proprietors of the dyeing factories are no members of the societies, what should they do for yarn?

The Hon'ble Sri T. MARIAPPA.—Sir, the societies can get yarn and distribute the yarn. Those who get the yarn quota get the yarn dyed of their own accord. There is a little latitude.

Sri Kadidal MANJAPPA.—My question is, if they are not members of the handloom weavers' societies, how will they get the yarn?

The Hon'ble Sri T. MARIAPPA.—If this industry is run by a person who is also a handloom weaver then there is no trouble. If not, the weavers will get the yarn dyed.

Sri H. SIDDAVEERAPPA (Chitaldrug District—General).—What is the position of this Provincial Cotton Co-operative Society? Is it that of a procurer or a wholesaler?

The Hon'ble Sri T. MARIAPPA.—It has no status of the kind attributed. The sole idea is that there ought to be a provincial co-operative society to which will be linked all the primary societies. The Provincial Co-operative Society will procure yarn either from the mills or from the wholesalers and distribute it and have marketing operations and other allied activities.

Sri H. SIDDAVEERAPPA.—Is it not absolutely necessary to avoid any middleman there and straightaway link the Society to the mill and make it the procurer?

The Hon'ble Sri T. MARIAPPA.—It would be an excellent thing. But there are practical difficulties.

Sri H. SIDDAVEERAPPA.—What are those practical difficulties?

The Hon'ble Sri T. MARIAPPA.—The question of finance, necessary staff—all these take a little more time.

Sri H. SIDDAVEERAPPA.—It was said 'through the usual trade channels it was effected'. What is the usual trade channel? Is it those who have done business for dacades or is it those who have taken to this business after the controls were introduced?

The Hon'ble Sri T. MARIAPPA.—By 'usual trade channels' we mean all those people who were engaged in busi-

ness at the time of inauguration of controls.

Sri H. SIDDAVEERAPPA.—Is it not necessary that in the interest of handloom weavers these middlemen are removed and that the Provincial Society is directly linked with all those societies?

The Hon'ble Sri T. MARIAPPA.—That is the objective of the entire scheme.

Sri H. C. LINGA REDDY (Kolar District-General).—I want to know the reason why the yarn distribution has been changed from the merchant to the society?

The Hon'ble Sri T. MARIAPPA.—It is not a question of change from merchant to society. We wanted to rehabilitate the weavers. They were very poor. We wanted them to organise themselves into co-operative societies and take up the distribution of yarn and improve their calling.

Sri H. C. LINGA REDDY.—When the merchants were distributing yarn, were there complaints that they were not properly distributing it and that they were blackmarketing and so on?

The Hon'ble Sri T. MARIAPPA.—It is not a supplementary arising out of the main question. That has nothing to do with this. The scheme was to rehabilitate the weavers.

Sri H. C. LINGA REDDY.—Does it mean that the merchants also will be given some yarn for distribution?

The Hon'ble Sri T. MARIAPPA.—It is a question of working on practical lines.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ನೂಲನ್ನು ಮೈಸೂರು ಪ್ರೊವಿಷಿಯಲ್ ಕಾರ್ಪೆಂಟೀವರ್ಸ್ ಕೋಆಪರೇಟಿವ್ ಸೊಸೈಟಿಯವರು ಯಾರಿಂದ ಪಡೆಯುತ್ತಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೇರವಾಗಿ ಫಿಲ್ಲುಗಳಿಂದ ಹೋಲ್‌ಸೇಲರುಗಳು ಪಡೆಯುತ್ತಾರೆ. ಅವರಿಂದ ಇವರು ಪಡೆಯುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇವರು ಹೋಲ್‌ಸೇಲರೋ ಅಥವ ಪ್ರೊಕ್ಯೂರರೊ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರು ಹೋಲ್‌ಸೇಲರು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೋಲ್‌ಸೇಲರು ಮತ್ತು ಪ್ರೊಕ್ಯೂರರುಗಳು ಯಾರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇವರು ಎಷ್ಟು ಜನರಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆ ಸಹಕಾರ ಸಂಘದವರು ತಾವು ಪ್ರೊಕ್ಯೂರರಾಗಲು ಹಣದ ಅಭಾವವೆಂದು ತಮಗೆ ತಿಳಿಸಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರಿಗೆ ಸರ್ಕಾರದವರೇ $3\frac{1}{2}$ ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅವರು ಅದಕ್ಕೆ ತಮಲ್ಲಿ ಹಣವಿಲ್ಲವೆಂದು ಹೇಳಿದರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಆ ಸಂಘದವರಿಗೆ $3\frac{1}{2}$ ಲಕ್ಷ ರೂಪಾಯಿ ಅಡ್ವಾನ್ಸ್ ಕೊಡಬೇಕೆಂದು ಸರ್ಕಾರಿ ಆಜ್ಞೆಯಲ್ಲಿಯೇ ತಿಳಿಸಿದ್ದಾರೆ. ಇದುವರೆಗಾಗಲೇ ಇದರಲ್ಲಿ $2\frac{1}{2}$ ಲಕ್ಷ ರೂಪಾಯಿ ಕೊಟ್ಟಿದ್ದಾರೆ.....

Sri H. M. CHANNABASAPPA.—Mr. Speaker, we do not want all this discussion. I want to have a specific answer to a specitic question, whether these co-operative societies pleaded financial difficulties in order to obtain yarn direct?

The Hon'ble Sri T. MARIAPPA.—Sir, it is a question of knowing facts. In fact they are seriously handicapped for want of finances.

Sri H. M. CHANNABASAPPA.—Has it come to the notice of the Government that the co-operative societies have expressed their inability?

The Hon'ble Sri T. MARIAPPA.—Government are fully aware of the position.

Sri H. M. CHANNABASAPPA.—Have they expressed their inability I want to know. I want a specific answer. Have they expresed their financial inabilities to be procurers or wholesalers?

The Hon'ble Sri T. MARIAPPA.—When the Government are fully aware of it, there was no need for them to express. We know their capacity. After all it is just in the process of stabilisation and we need not discourage them or dishearten them.

Sri H. M. CHANNABASAPPA.—Shall I take it that the Government have no definite answer for my question?

Mr. DEPUTY SPEAKER.—There is an answer.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ-ನಿಮ್ನ ಪಂಗಡ).—ಈ ನೂಲು ಗ್ರಾಮಾಂತರಗಳಲ್ಲಿರತಕ್ಕ ನೇಯ್ಗೆಯವರಿಗೆ ನಿಜವಾಗಿ ತಲಪುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದು ಊಹಾ ಪ್ರಶ್ನೆ. ಅವರಿಗೆ ತಲುಪಬೇಕೆಂಬ ಉದ್ದೇಶದಿಂದ ಲೇ ಈ ಸಹಕಾರ ಸಂಘಗಳ ಮೂಲಕ ಹಂಚಿಕೆ ಮಾಡ ಬೇಕೆಂದು ಮಾಡಿರುವುದು.

ಶ್ರೀ ಟಿ. ಹನುಮಯ್ಯನವರು.—ಗ್ರಾಮಾಂತರ ಗಳಲ್ಲಿ ಹೆಚ್ಚಾಗಿ ಹರಿಜನ ಮಗ್ಗದವರಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರೂ ಇದ್ದಾರೆಂಬುದು ಗೊತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಅಲ್ಲಿ ನೂಲನ್ನು ಹಂಚುವವರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರೈಮರಿ ಸಹಕಾರ ಸಂಘದವರು ಅಲ್ಲಲ್ಲಿರುತಕ್ಕ ಕೈಮಗ್ಗದವರಿಗೆ ಹಂಚಬೇಕೆಂಬುದೇ ನಮ್ಮ ಏರ್ಪಾಡಿನ ಉದ್ದೇಶ.

ಶ್ರೀ ಟಿ. ಹನುಮಯ್ಯನವರು.—ನೆಯ್ಗೆಯವರಲ್ಲದವ ರಿಗೂ ಈಗ ದಾರ ಕೊಡುತ್ತಿದ್ದಾರೆಂಬುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಈ ದಾರ ಹಂಚತಕ್ಕ ಕೆಲಸದಲ್ಲಿ ಚೆಕ್ಸ್‌ಟೈಲ್ ಇನ್‌ಸ್ಪೆಕ್ಟರ ಪಾತ್ರವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಚೆಕ್ಸ್‌ಟೈಲ್ ಇನ್‌ಸ್ಪೆಕ್ಟರ ಪಾತ್ರ ತನಿಖೆ ಕ್ರಮ ನಡೆಸುವುದು ಮತ್ತು ಈ ನೆಯ್ಗೆ ಉದ್ಯಮಗಳನ್ನು ಅಭಿವೃದ್ಧಿಪಡಿಸುವುದು.

ಶ್ರೀ ಟಿ. ಹನುಮಯ್ಯನವರು.—ಈ ಚೆಕ್ಸ್‌ಟೈಲ್ ಇನ್‌ಸ್ಪೆಕ್ಟರವರು ಯಾವ ಗ್ರಾಮಗಳಿಗೂ ಹೋಗದೆ ಮನೆಯ ಮುಂದೆ ಕುಳಿತುಕೊಂಡು ನೂಲನ್ನು ಹಂಚುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಈ ಚೆಕ್ಸ್‌ಟೈಲ್ ಇನ್‌ಸ್ಪೆಕ್ಟರಿಗೆ ನಂಬಳವೇನು ?

Mr. DEPUTY SPEAKER.—That does not arise.

ಶ್ರೀ ಟಿ. ಹನುಮಯ್ಯನವರು.—ಈ ಚೆಕ್ಸ್‌ಟೈಲ್ ಇನ್‌ಸ್ಪೆಕ್ಟರುಗಳು ನಿಜವಾಗಿಯೂ ಯಾವ ಗ್ರಾಮಕ್ಕೂ ಹೋಗದೆ ಬಟ್ಟೆ ನೇಯತಕ್ಕವರಿಗೆ ಸರಿಯಾಗಿ ನೂಲನ್ನು ಹಂಚುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ತಮ್ಮ ಪ್ರಶ್ನೆಗಳೆಲ್ಲಾ ಊಹಾ ಪೋಹದ ರೀತಿಯಲ್ಲಿವೆ.

ಶ್ರೀ ಟಿ. ಹನುಮಯ್ಯನವರು.—ಸರ್ಕಾರದವರಿಂದ ಯಾರು ನೂಲು ತೆಗೆದುಕೊಂಡು ಹೋಗುತ್ತಾರೋ, ಅಂಥವರು ಅವರು ತಯಾರಿಸಿದ ಬಟ್ಟೆಯನ್ನು ಸರ್ಕಾರಕ್ಕೇ ಒಪ್ಪಿಸಬೇಕೆಂಬ ನಿಯಮವನ್ನು ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೆ ಆ ಉದ್ದೇಶಗಳನ್ನೆಲ್ಲಾ ವಿವರಿಸಲಾಗಿದೆ.

ಶ್ರೀ ಟಿ. ಹನುಮಯ್ಯನವರು.—ಈ ಚೆಕ್ಸ್‌ಟೈಲ್ ಇನ್‌ಸ್ಪೆಕ್ಟರುಗಳಿಂದ ನೆಯ್ಗೆಯವರಿಗೆ ನಿಜವಾಗಿಯೂ ನೂಲು ಸಿಕ್ಕದೆ ಇವರಿಂದ ಬಹಳ ಅವಾಂತರವಾಗು ತ್ತಿರುವುದು ತಮಗೆ ಗೊತ್ತಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥಾದ್ದಾ ವುದೂ ನಮ್ಮ ನಿಗಾಕ್ಕೆ ಬಂದಿಲ್ಲ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಮ ಪಂಗಡ).—ಈಗ ತಾವು ಮಾಡಿರತಕ್ಕ ಈ ನೆಯ್ಗೆ ಯವರ ಪರಸ್ಪರ ಸಹಾಯ ಸಂಘಗಳು ಮತ್ತು ಪ್ರೊವಿಷಿಯಲ್ ಕಾಟೇಜ್ ವೀವರ್ಸ್ ಕೋ ಆಪರೇಟಿವ್ ಸೊಸೈಟಿಗಳು, ಇವೆಲ್ಲವನ್ನು ಆ ನೆಯ್ಗೆವರ ಇಷ್ಟದ ಪ್ರಕಾರ ತಾನೆ ತಾವು ಏರ್ಪಾಡು ಮಾಡಿರುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರೆ ಹಾಗೆ ಯಾವ ಮನವಿಗಳೂ ಬಂದಿರಲಿಲ್ಲ. ಈ ಕೈಮಗ್ಗದ ಕೈಗಾರಿಕೆ ದಿನೇ ದಿನೇ ಕ್ಷೀಣಗತಿಗೆ ಬರುತ್ತಿದ್ದ ಕಾರಣ ಇಲ್ಲಿಂದ ಒಬ್ಬ ಸ್ಪೆಷಲ್ ಅಧಿಕಾರಿಗಳನ್ನು ಮದರಾಸಿಗೆ ಕಳುಹಿಸಿಕೊಟ್ಟು ಅಲ್ಲಿ ಈ ಕೈಗಾರಿಕಾಭಿ ವೃದ್ಧಿ ಹೇಗೆ ನಡೆದುಕೊಂಡು ಬರುತ್ತಿದೆಯೆಂಬುದನ್ನು ಪರಿಶೀಲನೆ ಮಾಡಿಕೊಂಡು, ಆ ಬಗ್ಗೆ ಎಲ್ಲಾ ಅಂಕಿ ಅಂಶಗಳನ್ನು ಸಂಗ್ರಹಮಾಡಿಕೊಂಡು ಬರುವಂತೆ ಕಳು ಹಿಸಲಾಗಿತ್ತು. ಹಾಗೆ ಅವರು ಅಲ್ಲಿಂದ ಪರಿಶ್ರಮ ಪಡೆದುಕೊಂಡು ಬಂದನಂತರ ಇಲ್ಲಿ ಮೈಸೂರಿನವ್ವಲ್ಲರ ತಕ್ಕ ಪ್ರಮುಖ ನೆಯ್ಗೆಯವರನ್ನು ಬರಮಾಡಿಕೊಂಡು ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ನಿರ್ಧಾರಕ್ಕೆ ಬಂದಮೇಲೆ ನಾವು ಈ ಸಂಸ್ಥೆಗಳನ್ನೆಲ್ಲಾ ಪ್ರಾರಂಭ ಮಾಡಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ಅಂದರೆ ಅವರ ಇಷ್ಟದ ಪ್ರಕಾರ ತಾನೆ ಮಾಡಿದ್ದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಂ. ಮಾದಯ್ಯನವರು.—ಈಗ ನಮ್ಮ ಸಂಸ್ಥಾ ನದಲ್ಲಿ ನೆಯ್ಗೆಯವರು ನಡೆಸುತ್ತಿರುವ ಪರಸ್ಪರ ಸಹಾ ಯ ಸಂಘಗಳು ಎಷ್ಟಿವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಂ. ಮಾದಯ್ಯನವರು.—ಈಗ ತಾವು ಏರ್ಪಾಡು ಮಾಡಿರತಕ್ಕ ಪರಸ್ಪರ ಸಹಾಯ ಸಂಘ ಗಳನ್ನು ಪ್ರತಿಯೊಂದು ತಾಲ್ಲೂಕು ಕಸಬೆಗಳಲ್ಲೂ ಇರ ಬೇಕೆಂದು ಮಾಡಿದ್ದೀರೋ ಅಥವಾ ಆಯಾಯ ಸ್ಥಳದ ಆವಶ್ಯಕತೆಗಳಿಗನುಗುಣವಾಗಿರುವಂತೆ ಏರ್ಪಾಡಿಸ ಬೇಕೆಂದಿದ್ದೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಬಗ್ಗೆ ನಾವು ಇದನ್ನು ಪುನರ್‌ವ್ಯವಸ್ಥೆಗೊಳಿಸುವ ಅವಶ್ಯಕತೆ ಇದೆಯೆಂಬುದನ್ನು ಆಗಲೇ ತಿಳಿಸಿದ್ದೇನೆ. ಎಲ್ಲೆಲ್ಲಿ 200 ಕ್ಕಿಂತ ಜಾಸ್ತಿಯಾಗಿ ಕೈಮಗ್ಗಗಳಿವೆಯೋ ಅಲ್ಲೆಲ್ಲಾ ಒಂದೊಂದು ಪರಸ್ಪರ ಸಹಾಯ ಸಂಘವನ್ನು ತೆರೆಯ ಬೇಕೆಂದಿದ್ದೇವೆ. ಈ ಆಭಿಪ್ರಾಯದ ಮೇಲೆ ಕೆಲವನ್ನಾ ಗಲೆ ಅಂದರೆ ರಿಜಸ್ಟರ್ಡ್ ಕೋ ಆಪರೇಟೀವ್ ಸೊಸೈಟಿ ಗಳನ್ನು ಈಗ ಸ್ಥಾಪನೆ ಮಾಡಿದ್ದೇವೆ. ಇದೇ ರೀತಿ ಎಲ್ಲೆಲ್ಲಿ 200 ಕೈಮಗ್ಗಗಳಿಗಿಂತ ಹೆಚ್ಚಾಗಿ ನೆಯ್ಗೆಯವ ರಿರುತ್ತಾರೋ ಅಲ್ಲಲ್ಲಿಗೆಲ್ಲ ಈಗ ನದ್ಯದಲ್ಲಿ ಮಲ್ಟಿ-ಪರ್ಪಸ್ ಕೋ-ಆಪರೇಟೀವ್ ಸೊಸೈಟಿಗಳಿಂದ ಈ ಕೆಲಸ ನಡೆಸ ಬೇಕೆಂದಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ಈಗ ತಾವು ತಿಳಿ ಸಿದ ಪ್ರಕಾರ ವೀವರ್ಸ್ ಕೋ ಆಪರೇಟಿವ್ ಸೊಸೈಟಿ ಮತ್ತು ಮಲ್ಟಿ-ಪರ್ಪಸ್ ಕೋ ಆಪರೇಟಿವ್ ಸೊಸೈಟಿ ಗಳಿಂದ ನೂಲನ್ನು ನರಬರಾಯಿ ಮಾಡಿಸಲಾಗುತ್ತಿದೆ. ಆದರೆ ಇನ್ನು ಬೇರೆ ಇರತಕ್ಕ ರಿಜಿಸ್ಟರ್ಡ್ ಸೊಸೈಟಿಗ ಳಿಂದ ಈ ಹಂಚಿಕೆ ನಡೆಸಲು ಆಗುತ್ತದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಊಹಾ ಪೋಹದ ಪ್ರಶ್ನೆ ಮತ್ತು ಇದಕ್ಕೆ ಸಂಬಂಧಿಸಿದ ಉಪ ಪ್ರಶ್ನೆಯಾಗುವುದಿಲ್ಲ.

ಶ್ರೀ ಎಂ. ಮಾದಯ್ಯನವರು.—ಈಗ ವರ್ತಕರ ಮೂಲಕ ಶೇಕಡ 75ರಷ್ಟನ್ನೂ ಮತ್ತು ಚಿಲ್ಲರೆ ಸೊಸೈಟಿ ಇತ್ಯಾದಿಯವರಿಂದ ಶೇಕಡ 25 ರಷ್ಟನ್ನೂ ಹಂಚಲಾಗು ತ್ತಿದೆಯೆಂದು ಹೇಳಿದಿರಿ. ಇದರಿಂದಲೂ ನ್ಯಾಯವಾದ ಹಂಚಿಕೆ ನಡೆಯುತ್ತಿಲ್ಲವೆಂದು ತಮಗೇನಾದರೂ ಅರ್ಜಿ ಗಳು ಬಂದಿವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಬಂದಿವೆ.

ಶ್ರೀ ಎಂ. ಮಾದಯ್ಯನವರು.—ಆ ಬಗ್ಗೆ ಏನು ತೀರ್ಮಾನಕ್ಕೆ ಬರಲಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಎಂ ಮಾದಯ್ಯನವರು.—ಇದರಿಂದ ನೆಯ್ಗೆಯವರಿಗೆ ತುಂಬಾ ತೊಂದರೆಯಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ತಮ್ಮ ಅಭಿಪ್ರಾಯವಿರಬಹುದು.

ಶ್ರೀ ಎಂ. ಮಾದಯ್ಯನವರು.—ಈಗ ತಾವು ಏರ್ಪಾಡು ಮಾಡಿರುವುದರಲ್ಲಿ ಗ್ರಾಮಾಂತರವಾಸಿಗಳಿಗೆ ಸರಿಯಾಗಿ ನೂಲು ದೊರೆಯದೆ ತುಂಬಾ ತೊಂದರೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಹೇಳಿತಕ್ಕದ್ದರಲ್ಲಿ ಒಂದೆರಡು ಅಂಥ ನಿದರ್ಶನಗಳಿರಬಹುದು. ಮಧ್ಯವರ್ತಿಗಳಿಂದ ಹಾಗೆ ತೊಂದರೆ ಆಗಿದ್ದರೂ ಆಗಿರಬಹುದು. ಈ ವಿಚಾರಗಳೆಲ್ಲ ತಮಗೇ ಗೊತ್ತಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಕೆಲವು ನೆಯ್ಗೆಯವರು ನೇಯುವುದಕ್ಕೆಂದು ನೂಲು ತೆಗೆದುಕೊಂಡು, ಅದನ್ನು ನೆಯ್ಗೆಗೆ ಉಪಯೋಗಿಸದೆ ಅಕ್ಕಪಕ್ಕದ -ಪ್ರಾಂತ್ಯಗಳವರಿಗೆ ಬ್ಲಾಕ್‌ಮಾರ್ಕೆಟ್ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

The Hon'ble Sri T. MARIAPPA.—That question does not arise. The question is purely one relating to distribution of yarn.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಎಷ್ಟು ನೂಲನ್ನು ಕೊಟ್ಟಿದ್ದರೆ ಅಷ್ಟು ಬಟ್ಟೆ ತಂದುಕೊಟ್ಟರೆ ನಂತರ ನೂಲನ್ನು ಕೊಡಬೇಕೆಂದು ನಿಗದಿ ಏನಾದರೂ ಮಾಡಿದ್ದೀರಾ ?

The Hon'ble Sri T. MARIAPPA.—It does not arise out of this question. One or two instances have come to our notice.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮದರಾಸಿನಲ್ಲಿರುವ ತಕ್ಕ ಕೋ-ಆಪರೇಟೀವ್ ಸೊಸೈಟಿಗಳನ್ನು ನೋಡಿಕೊಂಡು ಬರಲಾಗಿದೆಯೆಂದು ತಿಳಿಸಿದ್ದೀರಿ. ಅಲ್ಲಿ ಹಂಚಿಕೆಯಾಗತಕ್ಕ ನೂಲು ಪೈಕಿ ಎಷ್ಟು ಭಾಗ ಈ ಕೋ-ಆಪರೇಟೀವ್ ಸೊಸೈಟಿಗಳ ಮೂಲಕ ಹಂಚಿಕೆಯಾಗುತ್ತಿದೆ ಮತ್ತು ಎಷ್ಟು ಭಾಗ ಖಾಸಗೀ ಜನರಿಂದ ಹಂಚಿಕೆಯಾಗುತ್ತಿದೆಯೆಂಬ ಬಗ್ಗೆ ತಮ್ಮಲ್ಲಿ ಅಂಕಿ ಅಂಶಗಳಿವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇವೆ. ಹಾಲಿ ಆ ಅಂಕಿ ಅಂಶಗಳು ನನ್ನಲ್ಲಿಲ್ಲ. ತಮಗೆ ಬೇಕಾದರೆ ಆಮೇಲೆ ಕೊಡುತ್ತೇನೆ.

ಮುಷೀರ್ ಉಲ್-ಮುಲ್ಕ್ ಜೆ. ಮಹಮದ್ ಇಮಾಂ ವರು (ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆ—ಮುಸ್ಲಿಂ).—ಈ ಮಲ್ಬರ್ರಿಸ್ ಕೋ-ಆಪರೇಟೀವ್ ಸೊಸೈಟಿಗಳಿಂದ ನೂಲನ್ನು ಕೊಡಬೇಕೆಂದು-ಯಾವಾಗ ತಾವು ಈ ಏರ್ಪಾಡು ಮಾಡಿದಿರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೆ ಇದಕ್ಕೆ ಉತ್ತರ ಹೇಳಿದ್ದೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಕೆಲವು ನೆಯ್ಗೆಯವರು ತಮ್ಮಲ್ಲಿ ಬಂದು ಮನವಿ ಮಾಡಿಕೊಂಡಾಗ ಈ ನೂಲಿನ ಹಂಚಿಕೆ ಪ್ರಶ್ನೆ ಕೇಂದ್ರದವರಿಗೆ ಸಂಬಂಧಿಸಿದ್ದು ಅವರನ್ನೇ ಹೋಗಿ ಕೇಳಬೇಕೆಂದು ತಾವು ತಿಳಿಸಿದಿರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಮ್ಮ ಪ್ರಶ್ನೆ ನಿರ್ದಿಷ್ಟವಾಗಿಲ್ಲ. ಹಂಚಿಕೆ ವಿಚಾರವೆಲ್ಲಾ ನಮ್ಮ ಕೈಲಿರುವಾಗ ನಾವೇಕೆ ಅವರಿಗೆ ಕೇಂದ್ರದವರ ಬಳಿಗೆ ಹೋಗಿ ಎಂದು ತಿಳಿಸಬೇಕು ? ಖಂಡಿತ ಹಾಗೆ ತಿಳಿಸಿಲ್ಲ.

ಶ್ರೀ ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಈಗ ನೆಯ್ಗೆಯವರಿಗೆ ಈ ಕೋ-ಆಪರೇಟೀವ್ ಸೊಸೈಟಿಗಳಿಂದ ಸರಿಯಾಗಿ ನೂಲು ಸರಬರಾಯಿ ಆಗುತ್ತಿಲ್ಲವಾದ್ದರಿಂದ ಬೇರೊಂದು ವ್ಯವಸ್ಥೆ ಮಾಡಲು ಆಲೋಚಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೊಂದು ಉಪಪ್ರಶ್ನೆ ಆಗುವುದಿಲ್ಲ.

ಶ್ರೀ ಹುಚ್ಚಮಾಸ್ತಿಗೌಡರು.—ಈ ಸೊಸೈಟಿಗಳವರೆಲ್ಲರೂ ಒಂದೇ ರಖಂ ದಾರ ಹಂಚಬೇಕೆಂದು ತಿಳಿಸಿದ್ದಿರಾ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಎಲ್ಲಾ ರಖಂ ದಾರಗಳನ್ನೂ ಹಂಚುತ್ತಿದ್ದಾರೆ. 20-30-40ನೆಯ ನಂಬರ್ ದಾರ ಹೀಗೆ, ಅನೇಕ ದಾರಗಳು ಬರುತ್ತವೆ. ಅವುಗಳನ್ನೆಲ್ಲಾ ಹಂಚುತ್ತಿದ್ದಾರೆ. ಅಲ್ಲದೆ ಬೇರೆ ಬೇರೆ ಬಣ್ಣದ ದಾರಗಳನ್ನು ಹಂಚುತ್ತಿದ್ದಾರೆ.

ಶ್ರೀ ಹುಚ್ಚಮಾಸ್ತಿಗೌಡರು.—ಹಾಗೆ ನಾನಾ ರಖಂ ದಾರಗಳನ್ನು ಹಂಚುತ್ತಿದ್ದರೆ, ಹರಿಜನರಿಗೆ ಬೇಕಾದ ಒಂದು ರಖಂ ದಾರ ಕೊಡದೆ ಅವರಿಗೆ ಬೇಡದಿರುವ ರಖಂ ದಾರ ಕೊಡುತ್ತಿರುವುದರಿಂದ, ಆಯಾಯ ಸ್ಥಳಗಳಿಗೆ ಲಗತ್ತಾಗುವ ದಾರಗಳನ್ನು ಕೊಡುವಂತೆ ಏರ್ಪಾಡು ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಯಾವ ಸ್ಥಳಕ್ಕೆ ಏನೇನು ನೂಲು ಬೇಕಾಗಿರುತ್ತೆಂಬ ನಿಗಾದ ಮೇಲೆ ನಾವು ಇದನ್ನು ವ್ಯವಸ್ಥೆ ಮಾಡಿರತಕ್ಕದ್ದು.

ಶ್ರೀ ಹುಚ್ಚಮಾಸ್ತಿಗೌಡರು.—ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎಷ್ಟೆಷ್ಟು ಕೈಮಗ್ಗಗಳಿರುತ್ತವೆಂಬುದಕ್ಕೆ ಅಂಕಿ ಅಂಶಗಳನ್ನಿಟ್ಟುಕೊಂಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು —ಇಡಲಾಗಿದೆ.

ಶ್ರೀ ಹುಚ್ಚಮಾಸ್ತಿಗೌಡರು.—ಒಬ್ಬೊಬ್ಬರಿಗೆ ಎಷ್ಟು ನೂಲನ್ನು ಕೊಡಬೇಕೆಂದು ನಿರ್ಧರಿಸಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅರ್ಧಕಟ್ಟು ನೂಲಿನಂತೆ ಗೊತ್ತುಮಾಡಲಾಗಿದೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ತಾವು ಈಗ ಕೊಡುತ್ತಿರುವ ದಾರಕ್ಕೆ ಒಂದೇ ರೀತಿಯ ಬಣ್ಣವನ್ನು ಹಾಕಿ ಕೊಡುವುದರಿಂದ ಈ ನೂಲು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟವಾಗತಕ್ಕದ್ದನ್ನೇ ತಪ್ಪಿಸಲು ಅನುಕೂಲವಾಗುತ್ತೆಂದು ಹೀಗೆ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. That is also one of the objects.

Mr. DEPUTY SPEAKER.—Question No. 151. Sri V. S. Narayana Rao. The Hon'ble Member is not present. The question will be treated as an unstarred question.

Mr. DEPUTY SPEAKER.—Question hour is over.

Sri V. S. NARAYANA RAO.—No. 151 is my question. I request that it may be taken up tomorrow.

Mr. DEPUTY SPEAKER.— We will consider; now Question time is over. There is a Short-Notice Question by Sri M. N. Jois.

SHORT NOTICE QUESTION AND ANSWER.

Resolution of Mandya Municipal Council re. restriction on the term of President and Vice-President.

Sri M. N. JOIS (Mysore District—General).—Will the Government be pleased to state:—

(1) when the Municipal Council of Mandya passed resolution requesting for restriction of the terms of the President and the Vice-President of Mandya for one year (copies of the resolution and orders of Government thereon may kindly be furnished);

(2) whether any resolutions were passed subsequently to ex end the period of persons in the Offices of President and Vice-President by another year (copies of resolutions with dates and orders passed thereon may kindly be furnished);

(3) whether they have taken legal advice in the matter and what that advice is?

Sri M. MADIAH (Mysore District—Depressed Class).—Copies of this question and answer to it may be furnished to the Members.

Mr. DEPUTY SPEAKER.—Copies cannot be supplied.

Mushir-ul Mulk J. MOHAMED IMAM (Chitaldrug *cum* Tumkur—Muslim).—I do not know why this procedure is started.

The Hon'ble Sri H. C. DASAPPA (The Minister for Finance and Industries).—We are improving.

Janab J. MOHAMED IMAM.—It is no improvement I must say. In order to facilitate members you have to supply them with copies of short notice question.

Sri M. MADIAH.—This question may be taken up tomorrow. On behalf of the House I request the Chair to permit the Hon'ble Member to take up the question tomorrow when copies of the question and answers are supplied to the House.

Mr. DEPUTY SPEAKER.—ಅಲ್ಪಕಾಲಾವಧಿ ಪ್ರಶ್ನೆಗಳಿಗೆ ಆ ರೀತಿ ಮುದ್ರಿಸಿ ಎಲ್ಲರಿಗೂ ಹಂಚುವ ಪದ್ಧತಿಯಿಲ್ಲ. The purpose of the Short-Notice Question will not be served if the question and answer are printed and supplied. Answer to Short-Notice Question will be furnished very early and there will be delay if the procedure of suppling printed copies of question and answers is followed. The purpose of short notice ques ion will not be serve l thereby.

ಜನಾಬ್ ಜೆ. ಮುಹಮದ್ ಇಮಾಂರವರು.—ಆ ಪದ್ಧತಿ ಇತ್ತು. ಈಗ ಕೊಡದಿರುವುದು ಪದ್ಧತಿಗೆ ವಿರೋಧವಾಗಿದೆ.

Sri M. MADIAH.—We cannot put supplementaries on this question. ಉಪ ಪ್ರಶ್ನೆಗಳನ್ನು ಹಾಕುವುದಕ್ಕೆ ನಮಗೆ ಬಹಳ ಕಷ್ಟ. ಆದ್ದರಿಂದ ನಾವು ಈ ಪ್ರಶ್ನೆಗಳನ್ನು ಎಲ್ಲರಿಗೂ ಒದಗಿಸಿ ನಾಳೆ ಚರ್ಚೆಗೆ ತೆಗೆದು ಕೊಳ್ಳುವುದರಿಂದ ಏನೂ ತೊಂದರೆಯಾಗುವುದಿಲ್ಲ. ದಯವಿಟ್ಟು ಅಧ್ಯಕ್ಷರು ಇದಕ್ಕೆ ಅವಕಾಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

Sri D. H. CHANDRASEKHARAIYA (Chitaldrug District—General).—We have adopted the practice of printing question and answer and distributing them to the Members. Of course, this procedure does not exist in other legislatures. Since you have adopted the practice of printing question and answer, I do not think you will be violating any practice if you adopt the printing of even Short-Notice Questions.

Mr. DEPUTY SPEAKER.—With regard to this can the Hon'ble Member point out any Rule?

Sri D.H. CHANDRASEKHARAIYA—There is no Rule; there is no prohibition even.

Mr. DEPUTY SPEAKER.—It will be considered later on. Now the question will be taken up.

The Hon'ble Sri H. C. DASAPPA.—The question has been put already.

Sri D. H. CHANDRASEKHARAIYA—It is a question of convenience to the Members. Therefore, the Chair may kindly permit the question being taken up tomorrow.